


# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ



**ಸ್ವಾ**ಮಿ ವಿಜ್ಞಾನಾನಂದಜಿ ಮಹಾರಾಜರು ಆಗ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದರು. ಸ್ವಾಮಿ ವಿವೇಕಾನಂದರ ಅನುಯಾಯಿಯಾದ ಮಿಸ್ ಮ್ಯಾಕ್ಲೌಡ್ ತಮ್ಮ ಕೆಲವು ಜೊತೆಗಾತಿಯರೊಡನೆ ಬೇಲೂರು ಮಠಕ್ಕೆ ಬರುವವರಿದ್ದರು. ಮಠದ ಹಿರಿಯ ಸಾಧುಗಳು, ಆಡಳಿತ ಮಂಡಲಿಯ ಸದಸ್ಯರು ವಿಜ್ಞಾನಾನಂದಜಿ ಅವರ ಹತ್ತಿರ ಬಂದರು; ಇಂಥ ದಿನ ಮಿಸ್ ಮ್ಯಾಕ್ಲೌಡ್ ಮತ್ತಿತರರು ಬೇಲೂರು ಮಠಕ್ಕೆ ಬರುತ್ತಾರೆ, ಅವರನ್ನು ತಾವು ಸ್ವಾಗತಿಸಬೇಕು ಎಂದು ವಿನಂತಿಸಿಕೊಂಡರು. ವಿಜ್ಞಾನಾನಂದರು ಇದಕ್ಕೆ ಸುತರಾಂ ಒಪ್ಪಿಕೊಳ್ಳಲೇ ಇಲ್ಲ. "ನಾನು ಏನುತಾನೇ ಮಾತನಾಡಲಿ? ನಾನು ಏನುತಾನೇ ಹೇಳಲಿ?" ಎಂದು ಬಂದಿದ್ದವರನ್ನೇ ಕೇಳುವುದಕ್ಕೆ ಆರಂಭಿಸಿದರು. ಆಗ ಒಬ್ಬ ಹಿರಿಯ ಸಾಧುಗಳು, ವಿಜ್ಞಾನಾನಂದಜಿ ಅವರಿಗೆ ಹೀಗೆ ಹೇಳಿದರು: "ತಾವು ಅವರನ್ನು ಬರಿ ಸ್ವಾಗತ ಮಾಡಿ; ಅನಂತರ ಅವರ ಜೊತೆ ಸ್ವಲ್ಪ ಕಾಲ ಮಾತನಾಡಿ." ಇದಕ್ಕೂ ವಿಜ್ಞಾನಾನಂದಜಿ ಅವರು ತಯಾರಿರಲಿಲ್ಲ. ಯಾರು ಎಷ್ಟು ಹೇಳಿದರೂ ಕೇಳುತ್ತಲೇ ಇಲ್ಲ. ಹೇಗಾದರೂ ಮಾಡಿ ಇದರಿಂದ ತಪ್ಪಿಸಿಕೊಳ್ಳಲು ನೋಡುತ್ತಿದ್ದರು. ಕಡೆಗೆ ಇನ್ನೊಬ್ಬ ಹಿರಿಯ ಸಾಧುಗಳು ಹೀಗೆ ಹೇಳಿದರು: "ಮಹಾರಾಜ್, ತಾವು ಮಠದ ಅಧ್ಯಕ್ಷರು. ಅವರೆಲ್ಲ ಬಂದು ನಿಮಗೆ ಪ್ರಣಾಮ ಮಾಡಿ ಹೋಗುತ್ತಾರೆ, ಅಷ್ಟೇ." ಸರಿ, ಈಗ ವಿಜ್ಞಾನಾನಂದರು ಒಪ್ಪಿಕೊಂಡರು. ಆದರೂ ಮತ್ತೆ ಮತ್ತೆ ಕೇಳಿದರು, "ಅವರ ಹತ್ತಿರ ಏನು ತಾನೇ ಮಾತನಾಡಲಿ?" ಅದಕ್ಕೆ ಆ ಹಿರಿಯ ಸಾಧುಗಳು ಹೇಳಿದರು, "ನೀವು ಅವರ ಹತ್ತಿರ ವಿಶೇಷವಾಗಿ ಮಾತುಕತೆಯಾಡುವ ಆವಶ್ಯಕತೆಯೇನೂ ಇಲ್ಲ. ಅವರು ನಿಮ್ಮ ಕೊಠಡಿಯ ಬಳಿಗೆ ಬಂದಾಗ, 'Come in Madam, Come in' – 'ಬನ್ನಿ, ತಾಯಿ, ಬನ್ನಿ' ಎಂದು ಹೇಳಿದರೆ ಸಾಕು. ಉಳಿದ ಮಾತುಕತೆಯನ್ನೆಲ್ಲಾ ನಾವು ನೋಡಿಕೊಳ್ಳುತ್ತೇವೆ."

ಮ್ಯಾಕ್ಲೌಡ್ ಬರುವ ದಿನ ಹತ್ತಿರವಾಗುತ್ತಿದ್ದಂತೆಯೇ, ವಿಜ್ಞಾನಾನಂದಜಿ ಚಿಕ್ಕ ಬಾಲಕನಂತೆ ಉದ್ವಿಗ್ನರಾಗಿಬಿಟ್ಟರು. ಸಿಕ್ಕಿದವರನ್ನೆಲ್ಲಾ, "ಅವರಿಗೆ ನಾನು ಏನು ಹೇಳಬೇಕು?" ಎಂದು ಕೇಳುತ್ತಿದ್ದರು. ಹಾಗೆಯೇ, 'Come in Madam, Come in' ಎಂದು ಗುಣುಗುಣಿಸತೊಡಗಿದರು. ಸಾಧುಗಳೆಲ್ಲ ಇದನ್ನು ನೋಡಿ ಆಶ್ಚರ್ಯಪಟ್ಟರು.

ನಿರ್ದಿಷ್ಟವಾದ ದಿನದಂದು, ಹಿರಿಯ ಸಾಧುಗಳು ಅತಿಥಿಗಳನ್ನು ವಿಜ್ಞಾನಾನಂದರ ಕೊಠಡಿಗೆ ಕರೆದುಕೊಂಡು ಹೋದರು. ಒಳಗೆ ಕಾಲಿಡುತ್ತಿದ್ದಂತೆಯೇ ವಿಜ್ಞಾನಾನಂದಜಿ, ಮಹಿಳೆಯರಾದ ಅವರನ್ನು ಸ್ವಾಗತಿಸಿ, "Come in Sir, Come in" – "ಬನ್ನಿ, ಸ್ವಾಮಿ, ಬನ್ನಿ" ಎಂದು ಹೇಳಿಬಿಡಬೇಕೇ?!

ಸ್ವಾಮಿ ವಿಜ್ಞಾನಾನಂದಜಿ ಅವರಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ ಎಂದಲ್ಲ. ಆಗಿನ ಕಾಲದ ಬ್ರಿಟಿಷರ ಸರಕಾರದ ಆಡಳಿತದಲ್ಲಿ ಅವರು ಇಂಜಿನಿಯರ್ ಆಗಿ ಕೆಲಸ ಮಾಡಿದ್ದರು. ಅದಲ್ಲದೆ ಮಹಾನ್ ಪಂಡಿತರು ಕೂಡ. ಆದರೆ ಈ ಸಮಯದಲ್ಲಿ ಅವರಿಗೆ ಸ್ತ್ರೀಪುರುಷರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಅಂಥ ಮೇಲ್ಮಟ್ಟದ ಸ್ತರದಲ್ಲಿ ಅವರು ಇದ್ದರು. ಅಂಥವರನ್ನು ಲೌಕಿಕ ವ್ಯವಹಾರದ ನೆಲೆಗೆ ಇಳಿಸಿ ಕರೆದುಕೊಂಡು ಬರುವುದು ಅತ್ಯಂತ ಕಷ್ಟಸಾಧ್ಯ.

* * *

**ಕಾ**ಶಿಯ ಅದ್ವೈತಾಶ್ರಮದಲ್ಲಿ ಆಗ ಆರ್ಥಿಕ ಮುಗ್ಗಟ್ಟಿತ್ತು. ಒಂದು ದಿನ, ದಿನನಿತ್ಯದಂತೆ, ಅಡುಗೆಯ ಮೇಲ್ವಿಚಾರಕರಾದ ಸಾಧುಗಳು, ಉಗ್ರಾಣದಿಂದ ಆ ದಿನದ ಅಡುಗೆಗೆ ಬೇಕಾದ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋದರು. ಸ್ವಲ್ಪಹೊತ್ತಿನಲ್ಲಿಯೇ ಆ ಆಶ್ರಮದ ಅಧ್ಯಕ್ಷ ಸ್ವಾಮೀಜಿಯವರು ಆ ಸಾಧುಗಳನ್ನು ಕರೆದು, "ಇವತ್ತು ಐದಾರು ಭಕ್ತರು ಆಶ್ರಮದಲ್ಲಿ ಪ್ರಸಾದ ಸ್ವೀಕರಿಸುತ್ತಾರೆ" ಎಂದರು. ಅಡುಗೆಯ ಮೇಲ್ವಿಚಾರಕ ಸಾಧುಗಳು ಇನ್ನಷ್ಟು ಹೆಚ್ಚು ಬೇಳೆಕಾಳುಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತೆ ಉಗ್ರಾಣದ ಬೀಗದಕೈ ಕೇಳಿದರು. ಅದಕ್ಕೆ ಅಧ್ಯಕ್ಷ ಸ್ವಾಮೀಜಿ ಹೇಳಿದರು: "ಇನ್ನೂ ಬೇಳೆ ಜಾಸ್ತಿ ಬೇಕು, ಜಾಸ್ತಿ ಬೇಕು ಎನ್ನುತ್ತೀಯಲ್ಲಾ. ತೊವ್ವೆಯಲ್ಲಿ ಬೇಳೆಗಿಂತಲೂ ಹೆಚ್ಚು ನೀರು ಹಾಕಿದರೆ ಆಗದೆ?" ಕೊನೆಗೂ ಅಧ್ಯಕ್ಷ ಸ್ವಾಮೀಜಿ ಬೀಗದಕೈ ಕೊಡಲೇ ಇಲ್ಲ!

* * *

**ಪೂ**ಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು ಉತ್ತರಕಾಶಿಯಲ್ಲಿ ತಪಸ್ಯೆ ಮಾಡುತ್ತಿದ್ದರು. ಆಗ ನಡೆದ ಒಂದು ತಮಾಷೆಯ ಪ್ರಸಂಗವನ್ನು ಅವರ ಬಾಯಿಯಿಂದಲೇ ಕೇಳೋಣ: "ನಾನು ಒಂದು ದಿನ ಧರ್ಮಛತ್ರದಿಂದ ಚಪಾತಿಯನ್ನು ಭಿಕ್ಷೆಯಾಗಿ ಪಡೆದು ನನ್ನ ಕುಟೀರಕ್ಕೆ ಹಿಂತಿರುಗುತ್ತಿದ್ದೆ. ಆಗ ಸ್ವಲ್ಪ ಅನ್ಯಮನಸ್ಕನಾಗಿದ್ದೆ. ಅಷ್ಟರಲ್ಲಿ ದಿಢೀರ್ ಎಂದು ಒಂದು ಕೋತಿ ಎಲ್ಲಿಂದಲೋ ಬಂದು ನನ್ನ ಕೈಯಲ್ಲಿದ್ದ ಚಪಾತಿಯನ್ನು ಎಳೆಯುವುದಕ್ಕೆ ಪ್ರಾರಂಭಿಸಿತು. ಉಳಿದ ಸಾಧುಗಳು ದೊಡ್ಡ ಧ್ವನಿಯಲ್ಲಿ, 'ಬಿಟ್ಟುಬಿಡು, ಬಿಟ್ಟುಬಿಡು' ಎಂದರು." ಒಬ್ಬರು ಭೂತೇಶಾನಂದಜಿ ಅವರನ್ನು, "ಆಗ ನೀವೇನು ಮಾಡಿದಿರಿ?" ಎಂದಾಗ, ಅವರು ಹೀಗೆ ಹೇಳಿದರು: "ಅಯ್ಯಾ, ನಾನೇನು ಅಷ್ಟು ಸುಲಭದಲ್ಲಿ ಬಿಡುವ ಆಸಾಮಿಯೇ?! ನಾನೂ ಎಳೆಯುವುದಕ್ಕೆ ಪ್ರಾರಂಭಿಸಿದೆ. ಕೋತಿಯೂ ಇನ್ನೊಂದು ಕಡೆಯಿಂದ ಎಳೆಯುತ್ತಿತ್ತು. ಕೊನೆಗೆ ಚಪಾತಿ ಹರಿದುಹೋಗಿ fifty - fifty ಉಳಿಯಿತು!"



# ಶ್ರೀರಾಮನಾಮ ಸಂಕೀರ್ತನೆಯ ರೋಚಕ ಇತಿಹಾಸ

ಸ್ವಾಮಿ ವಿದೇಹಾತ್ಮಾನಂದ

**ರಾ**ಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿಗೆ ಸೇರಿದ ೧೫೦ಕ್ಕೂ ಹೆಚ್ಚು ಶಾಖೆಗಳಿವೆ. ಅಲ್ಲದೆ, ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಯಿಂದ ಪ್ರಭಾವಿತವಾದ ನೂರಾರು ಇತರೆ ಧಾರ್ಮಿಕ ಕೇಂದ್ರಗಳಿವೆ. ಈ ಎಲ್ಲ ಆಶ್ರಮಗಳಲ್ಲಿ, ಪ್ರತಿ ಏಕಾದಶಿಯಂದು 'ರಾಮನಾಮ ಸಂಕೀರ್ತನೆ' ಅಥವಾ 'ನಾಮ-ರಾಮಾಯಣ' ವನ್ನು ಸಾಧುಗಳು ಮತ್ತು ಭಕ್ತರು ಶ್ರದ್ಧೆ, ಭಕ್ತಿ ಮತ್ತು ಉತ್ಸಾಹಗಳಿಂದ ಕೀರ್ತನೆ ಮಾಡುತ್ತಾರೆ. ರಾಮಕೃಷ್ಣ ಮಹಾಸಂಘದ ಪ್ರಪ್ರಥಮ ಅಧ್ಯಕ್ಷರು ಪೂಜನೀಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ ಅವರು. ಅವರು ೧೯೦೯ ನೆಯ ಇಸವಿಯಲ್ಲಿ ಮೊದಲಬಾರಿಗೆ ಈ ಸಂಕೀರ್ತನಾ ಕಾರ್ಯಕ್ರಮವನ್ನು ಆಯೋಜಿಸಿದರು. ಹೀಗೆ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಕೇಂದ್ರಗಳಲ್ಲಿ ರಾಮನಾಮ ಸಂಕೀರ್ತನೆಯ ಈ ಪುಣ್ಯ ಪರಂಪರೆಯ ಅಂಕುರವಾಯಿತು. ಈ ಸಂಕೀರ್ತನೆ ಪ್ರಾರಂಭವಾಗಿದ್ದು ಹೇಗೆ? ಈಗ ಆಶ್ರಮಗಳಲ್ಲಿ ಹಾಡುವ ಸಂಕೀರ್ತನೆಯ ಸ್ವರೂಪವನ್ನು ನಿರ್ಧಾರ ಮಾಡಿದ್ದು ಹೇಗೆ? ಈ ಎಲ್ಲ ಅಂಶಗಳ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಅರಿವನ್ನು ಉಂಟುಮಾಡಿಕೊಡಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ರಾಮಕೃಷ್ಣ ಮಹಾಸಂಘದಲ್ಲಿ 'ಶ್ರೀರಾಮನಾಮ ಸಂಕೀರ್ತನೆ'ಯು ಒಂದು ಅನುಪಮ ಸಂಪ್ರದಾಯವಾಗಿ ಬೆಳೆದುಬಂದಿದೆ. ಮರ್ಯಾದಾ ಪುರುಷೋತ್ತಮನೂ, ಪರಬ್ರಹ್ಮ ಸ್ವರೂಪಿಯೂ ಆದ ಶ್ರೀರಾಮಚಂದ್ರ ಪ್ರಭುವಿನ ಗುಣಗಾನದ ಈ ಸಂಕೀರ್ತನೆಯು ಪ್ರಚಾರಕ್ಕೆ ಬಂದ ಸ್ವಾರಸ್ಯಕರವಾದ ಕಥೆಯನ್ನು ಸರಳವಾಗಿ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು, ರಾಯಪುರದ ರಾಮಕೃಷ್ಣ ವಿವೇಕಾನಂದ ಆಶ್ರಮದಿಂದ ಪ್ರಕಟವಾಗುತ್ತಿರುವ ಹಿಂದಿ ಮಾಸಪತ್ರಿಕೆ 'ವಿವೇಕಜ್ಯೋತಿ'ಯ ಸಂಪಾದಕರು. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳ ಆಳವಾದ ಅಧ್ಯಯನ ಮಾಡಿರುವ ಪೂಜ್ಯರು, ಹಲವಾರು ರೀತಿಯ ಸಂಶೋಧನಾ ಯೋಜನೆಗಳಲ್ಲಿ ನಿರತರಾಗಿದ್ದಾರೆ. ಮೂಲ ಹಿಂದಿಯಿಂದ ಅನುವಾದ: **ಶ್ರೀಮತಿ ಸಿ. ಎಸ್. ಮಂಗಳಮ್ಮ.**

## ಬೆಂಗಳೂರಿನಲ್ಲಿ ಪ್ರಥಮ ಶ್ರವಣ

ಈ ಪುಣ್ಯಕಥೆಯ ಆರಂಭವಾಗುವುದು ೧೯೦೯ರಲ್ಲಿ. ಆ ವರ್ಷದ ಪ್ರಾರಂಭದಲ್ಲಿ ಬೆಂಗಳೂರಿನ ರಾಮಕೃಷ್ಣ ಆಶ್ರಮವು ಶುಭಾರಂಭಗೊಂಡಿತು. ಇದರ ಉದ್ಘಾಟನಾ ಮಹೋತ್ಸವಕ್ಕೆ ರಾಮಕೃಷ್ಣ ಮಹಾಸಂಘದ ಆಗಿನ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಶ್ರೀಮತ್ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ ಅವರು ಆಗಮಿಸಿದ್ದರು. ಆ ವರ್ಷದ ಜನವರಿ ೩೦ರಂದು ಆಶ್ರಮದ ಉದ್ಘಾಟನಾ ಸಮಾರಂಭವು ಪೂಜ್ಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಪೂಜ್ಯ ಸ್ವಾಮಿ ರಾಮಕೃಷ್ಣಾನಂದಜಿ ಮತ್ತು ಅಂದಿನ ಮೈಸೂರು ರಾಜ್ಯದ ದಿವಾನರಾಗಿದ್ದ ಶ್ರೀ ವಿ.ಪಿ. ಮಾಧವರಾವ್ ಭಾಷಣಗಳನ್ನು ಮಾಡಿದರು. ತದನಂತರ ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಅವರು ಸಮಯೋಚಿತವಾದ ನಾಲ್ಕಾರು ಮಾತುಗಳ ಮೂಲಕ, ಅಧ್ಯಕ್ಷೀಯ ಭಾಷಣವನ್ನು ಮಾಡಿ, ಎಲ್ಲರನ್ನೂ ಅನುಗ್ರಹಿಸಿದರು. ಇದರೊಂದಿಗೆ ಈ ಸಮಾರಂಭ ಸುಸಂಪನ್ನಗೊಂಡಿತು. ಬೆಂಗಳೂರಿನ ಭಕ್ತಜನರು ಪೂಜ್ಯರ ದರ್ಶನದಿಂದ ಸಂತುಷ್ಟರಾದರು; ಅವರ ಸಾನ್ನಿಧ್ಯ ಮತ್ತು ಆಶೀರ್ವಚನಗಳಿಂದ ಧನ್ಯತಾಭಾವವನ್ನು ಹೊಂದಿದರು.

ಬೆಂಗಳೂರು ರಾಮಕೃಷ್ಣ ಆಶ್ರಮದ ಉದ್ಘಾಟನಾ ಸಮಾರಂಭದ ಅಂಗವಾಗಿ ಆಶ್ರಮದ ಸುತ್ತಮುತ್ತಲಿನ ಚಮ್ಮಾರರು ಮತ್ತು ಇತರ ದಲಿತವರ್ಗದ ಕೆಲವು ಭಕ್ತರು, ಪ್ರತಿ ಭಾನುವಾರ ಆಶ್ರಮದ ಪ್ರಾರ್ಥನಾ ಮಂದಿರದಲ್ಲಿ ಶ್ರೀರಾಮಕೃಷ್ಣರ ಚಿತ್ರಪಟದ ಎದುರು ಕುಳಿತುಕೊಂಡು ಪ್ರಾರ್ಥನೆ ನಡೆಸುತ್ತ, ಆರಾಧನೆ ಸಲ್ಲಿಸುತ್ತಿದ್ದರು. ಅನಂತರ ಸಾಮೂಹಿಕವಾಗಿ 'ರಾಮನಾಮ ಸಂಕೀರ್ತನೆ'ಯನ್ನು ಹಾಡುತ್ತಿದ್ದರು. ಅನಂತರ ಪರಮಪೂಜ್ಯ ಅಧ್ಯಕ್ಷ ಸ್ವಾಮೀಜಿಯವರಿಗೆ ಪ್ರಣಾಮಗಳನ್ನು

ಸಲ್ಲಿಸಿ ತೆರಳುತ್ತಿದ್ದರು. ಅವರು ಹಾಡುತ್ತಿದ್ದ ರಾಮನಾಮ ಸಂಕೀರ್ತನೆಯು ಪೂಜ್ಯ ಸ್ವಾಮಿ ಬ್ರಹ್ಮಾನಂದ ಮಹಾರಾಜರಿಗೆ ಬಹಳ ಸಂತೋಷವನ್ನು ಉಂಟುಮಾಡಿತು. ಪೂಜ್ಯರು ಆ ಭಕ್ತರೊಡನೆ ಅತ್ಯಂತ ಪ್ರೀತಿ ಮತ್ತು ವಾತ್ಸಲ್ಯಗಳಿಂದ ನಡೆದುಕೊಳ್ಳುತ್ತಿದ್ದರು. ಇದನ್ನು ಕಂಡು, ಮೇಲ್ವರ್ಗದವರೆಂದು ಕರೆಸಿಕೊಳ್ಳುವ ಭಕ್ತರ ಮನಸ್ಸಿನಲ್ಲಿಯೂ ಮೇಲು–ಕೀಳುಗಳೆಂಬ ಕಂದಾಚಾರದ ಭಾವನೆ ಮಾಯವಾಯಿತು.

ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಅವರು ಬೆಂಗಳೂರಿನಲ್ಲಿ ತಾವು ಆಲಿಸಿದ 'ರಾಮನಾಮ ಸಂಕೀರ್ತನೆ' ಅಥವಾ 'ನಾಮ ರಾಮಾಯಣ' ದಿಂದ ಬಹಳ ಆಕರ್ಷಿತರಾದರು; ಅದು ಅವರ ಮನಸ್ಸನ್ನು ಆನಂದಗೊಳಿಸಿತು. ಇದನ್ನು ಬಂಗಾಳ ಪ್ರದೇಶದಲ್ಲಿಯೂ ಜನಪ್ರಿಯವನ್ನಾಗಿ ಮಾಡಬೇಕೆನ್ನುವ ವಿಶೇಷ ಅಭಿಪ್ರಾಯವನ್ನು ಅವರು ತಮ್ಮ ಜೊತೆಯಲ್ಲಿದ್ದವರಿಗೆ ವ್ಯಕ್ತಪಡಿಸಿದರು. ಇಡೀ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಬಂಗಾಳದಲ್ಲಿ ತ್ಯಾಗ, ಭಕ್ತಿ, ಜ್ಞಾನಗಳ ಮೂರ್ತಿವೆತ್ತ ರೂಪದಂತಿರುವ ಹನುಮಂತನ ಆರಾಧನೆಯನ್ನು ಆಚರಣೆಯಲ್ಲಿ ತರಬೇಕು ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಮನದಾಳದ ಇಚ್ಛೆಯನ್ನು ಹೊರಗೆಡಹಿದ್ದರು. ಇದನ್ನು ಅನುಸರಿಸಿಯೇ, ಸ್ವಾಮಿ ಬ್ರಹ್ಮಾನಂದಜಿ ಅವರು ಈ ರಾಮನಾಮ ಸಂಕೀರ್ತನೆಯ ಜೊತೆಜೊತೆಯಲ್ಲಿಯೇ, ಆಂಜನೇಯ ಸ್ವಾಮಿಯ ಆರಾಧನೆಯನ್ನೂ ಪ್ರಚುರಪಡಿಸುವುದಕ್ಕೆ ಮನಸ್ಸು ಮಾಡಿದರು. ಈ ಸಂಕೀರ್ತನೆಯನ್ನು ಲಿಪಿಬದ್ಧಗೊಳಿಸಿ, ಹಾಡುವುದಕ್ಕೆ ಸುಲಭವಾಗುವಂತಹ ರಾಗ ಸಂಯೋಜನೆಯನ್ನು ಮಾಡಬೇಕೆಂದು ತಮ್ಮ ಶಿಷ್ಯರಾದ ಸ್ವಾಮಿ ಅಂಬಿಕಾನಂದರಿಗೆ ಆದೇಶವಿತ್ತರು. ಇದಾದಮೇಲೆ ಕೆಲವು ದಿನಗಳನ್ನು ಬೆಂಗಳೂರಿನಲ್ಲಿ ಕಳೆದು, ಮುಂದೆ ಚೆನ್ನೈ ನಗರಕ್ಕೆ ಪ್ರಯಾಣ ಬೆಳೆಸಿದರು.

### ಪುರಿ ಪುಣ್ಯನಗರದಲ್ಲಿ ಸ್ವರ–ರಾಗ ಸಂಯೋಜನೆ

೧೯೦೯ನೆಯ ಇಸವಿ ಮೇ ತಿಂಗಳಿನಲ್ಲಿ ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ಚೆನ್ನೈ ನಗರದಿಂದ ಪುರಿಗೆ ಪಯಣಿಸಿದರು. ಅಲ್ಲಿನ 'ಶಶಿನಿಕೇತನ' ಎಂಬ ವಾಸಗೃಹದಲ್ಲಿ ವಾಸ್ತವ್ಯ ಹೂಡಿದರು. ಅಲ್ಲಿಯೇ ಬೆಂಗಳೂರಿನಿಂದ ಬರೆಸಿ ತಂದಿದ್ದ 'ರಾಮನಾಮ ಸಂಕೀರ್ತನೆ'ಗೆ ಪೂರಕವಾಗುವಂತೆ, ಆರಂಭಿಕ ಪ್ರಾರ್ಥನೆ ಮತ್ತು ಮಂಗಳಾಚರಣಗಳನ್ನು ಸೇರಿಸಲಾಯಿತು. ಸ್ವಾಮಿ ಅಂಬಿಕಾನಂದರು ರಾಗ ತಾಳಗಳನ್ನು ಸಂಯೋಜಿಸಿದರು. ತದನಂತರ ಶಶಿನಿಕೇತನದಲ್ಲಿ ಇದ್ದ ವಿಶಾಲ ಸಭಾಂಗಣದಲ್ಲಿ, ರಾಮಕೃಷ್ಣ ಮಹಾಸಂಘದ ಸಾಧುಬ್ರಹ್ಮಚಾರಿಗಳು ಮೊಟ್ಟಮೊದಲಬಾರಿಗೆ, ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಅವರ ಸಾನ್ನಿಧ್ಯದಲ್ಲಿ, ರಾಮನಾಮಸಂಕೀರ್ತನೆಯನ್ನು ಹಾಡಿದರು. ಆಮೇಲೆ ಪುರಿಯ ಪ್ರಸಿದ್ಧ ಜಗನ್ನಾಥ ದೇವಸ್ಥಾನದಲ್ಲಿ ಕೂಡ ಈ ಸಂಕೀರ್ತನೆಯನ್ನು ಆಯೋಜಿಸಲಾಗಿತ್ತು. ಇದನ್ನು ಆಲಿಸಿದ ಪುರಿ ಪಟ್ಟಣದ ಗಣ್ಯವ್ಯಕ್ತಿಗಳು, ವಿದ್ವಾಂಸರು ಮತ್ತು ನಿಷ್ಠಾವಂತ ಭಕ್ತರು ಅತ್ಯಂತ ಮುದಗೊಂಡರು.

### ಬೇಲೂರು ಮಠದಲ್ಲಿ ಮೊದಲ ಸಂಕೀರ್ತನೆ

೧೯೧೦ನೇ ಇಸವಿಯ ಮಧ್ಯಭಾಗ. ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ಪುರಿ ಪಟ್ಟಣದಿಂದ ಬೇಲೂರು ಮಠಕ್ಕೆ ಆಗಮಿಸಿದರು. ಈ ಬಗ್ಗೆ ಬ್ರಹ್ಮಚಾರಿ ಅಕ್ಷಯ ಚೈತನ್ಯರು ಹೀಗೆ ಬರೆಯುತ್ತಾರೆ: "ದಕ್ಷಿಣದೇಶದಿಂದ ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ 'ನಾಮ ರಾಮಾಯಣ'ದೊಂದಿಗೆ ಬೇಲೂರು ಮಠಕ್ಕೆ ಹಿಂತಿರುಗಿದ್ದಾರೆ. ಮಠದಲ್ಲಿ ಮೊಟ್ಟಮೊದಲ ಬಾರಿಗೆ ರಾಗ ಸಂಯೋಜನೆಯೊಂದಿಗೆ ಅದರ ಗಾಯನವು ಏರ್ಪಾಡಾಗಿದೆ. ಸಂಜೆಯ ಸಮಯ. ಮಠದ ಅಂಗಳವು ಜನರಿಂದ ಕಿಕ್ಕಿರಿದು ತುಂಬಿಹೋಗಿದೆ. ಗಿರೀಶ್ ಬಾಬು ಮತ್ತು ಮಾಸ್ಟರ್ ಮಹಾಶಯರೂ ಸಹ ಉಪಸ್ಥಿತರಾಗಿದ್ದಾರೆ." ಸಾಧುಬ್ರಹ್ಮಚಾರಿಗಳು ಹಾರ್ಮೋನಿಯಂ ಮುಂತಾದ ವಾದ್ಯಗಳ ಸಹಕಾರದೊಂದಿಗೆ ರಾಗ–ತಾಳ–ಲಯಬದ್ಧವಾಗಿ ರಾಮನಾಮ ಸಂಕೀರ್ತನೆಯನ್ನು ಮಾಡಿದರು. ನೆರೆದಿದ್ದ ಭಕ್ತ ಮಹಿಳೆಯರು ಮತ್ತು ಪುರುಷರು ಕೂಡ ಈ ನೂತನ ರೀತಿಯ ಸಂಕೀರ್ತನೆಯನ್ನು ಕೇಳಿ ಮಂತ್ರಮುಗ್ಧರಾಗಿ ಪರಮಾನಂದವನ್ನು ಅನುಭವಿಸಿದರು."

ಶ್ರೀ ಬಲರಾಮ ಬೋಸರ ಸುಪುತ್ರರಾದ ರಾಮಕೃಷ್ಣ ಬೋಸರ ದಿನಚರಿಯಿಂದ ಈ ಮುಂದಿನ ವಿಷಯಗಳು ತಿಳಿದು ಬರುತ್ತವೆ: "ಅಂದು ದಿನಾಂಕ ೧೯೧೦ರ ಮಾರ್ಚ್ ೧೩. ಅವತ್ತು ಶ್ರೀರಾಮಕೃಷ್ಣರ ಜಯಂತಿ ಮಹೋತ್ಸವದ ದಿನವೂ ಹೌದು. ಗಿರೀಶ್ ಬಾಬು, ಮಾಸ್ಟರ್ ಮಹಾಶಯ, ಪುಲಿನ್ ಬಾಬು, ಪೂರ್ಣಬಾಬು, ಶ್ಯಾಂ ಹಾಗೂ ಮತ್ತನೇಕ ಜನರು ನೆರೆದಿದ್ದರು. ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರ ಜೊತೆಯಲ್ಲಿ ಅನೇಕರು ರಾಮನಾಮ ಸಂಕೀರ್ತನೆಯಲ್ಲಿ ಪಾಲ್ಗೊಂಡರು... ಅಲ್ಲಿ ಆನಂದದ ಹೊಳೆಯೇ ಹರಿಯಿತು."

ಹಾಗೆಯೇ, ೧೯೧೦, ಮಾರ್ಚ್ ೨೦ರ ಭಾನುವಾರದಂದು ನಡೆದ ಸಾರ್ವಜನಿಕ ಜನ್ಮೋತ್ಸವ ಸಮಾರಂಭದಲ್ಲಿ ಕೂಡ 'ನಾಮ–ಸಂಕೀರ್ತನೆ' ಏರ್ಪಾಡಾಗಿತ್ತು. ಈ ಎರಡೂ ಸಮಾರಂಭಗಳ ವರದಿಯು ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ, ೧೯೧೦ ನೆಯ ಏಪ್ರಿಲ್ ಮಾಸದ ಸಂಚಿಕೆಯಲ್ಲಿ ಪ್ರಕಟವಾಯಿತು. ಅದರ ಮುಖ್ಯಾಂಶ ಹೀಗಿದೆ: "ಬೇಲೂರು ಮಠದಲ್ಲಿ ಮಾರ್ಚ್ ೧೩ರಂದು ಶ್ರೀರಾಮಕೃಷ್ಣರ ೭೭ನೇ ಜಯಂತಿ ಮಹೋತ್ಸವ ನಡೆಯಿತು. ಹಾಗೆಯೇ, ಮಾರ್ಚ್ ೨೦ರಂದು ಸಾರ್ವಜನಿಕ ಸಮಾರಂಭವೂ ಜರುಗಿತು. ಈ ವರ್ಷ ಸೌಭಾಗ್ಯವಶಾತ್ ಜನ್ಮದಿನವು ಭಾನುವಾರದಂದೇ ಬಂದಿದ್ದರಿಂದ ಅಧಿಕ ಸಂಖ್ಯೆಯಲ್ಲಿ ಭಗವಾನ್ ಶ್ರೀರಾಮಕೃಷ್ಣರ ಭಕ್ತರು, ವಿದ್ಯಾರ್ಥಿಗಳು ಭಾಗವಹಿಸುವ ಸದವಕಾಶ ಲಭ್ಯವಾಗಿತ್ತು. ಪ್ರಖ್ಯಾತ ಗಾಯಕರು ಹಾಡಿದ ಸಂಗೀತ ಸುಧೆಯಲ್ಲಿ ಸುಮಾರು ಒಂದು ಸಾವಿರ ಭಕ್ತರು ಮಿಂದು ಪುನೀತರಾದರು... ನಮ್ಮ ಪೂಜ್ಯ ಅಧ್ಯಕ್ಷ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಭಕ್ತಿ ರಸಾಸ್ವಾದನೆ ಇನ್ನಷ್ಟು